"ಸರಿ ನೀವೆಲ್ಲಾ ಬಂದಾಗ ಈ ಬಾಗಿಲು ತೆಗೆದಿತ್ತಾ? ಇದು ಎಲ್ಲಿಗೆ ತೆರೆದುಕೊಳ್ಳುತ್ತದೆ?" ತನ್ನ ಮುಂದಿದ್ದ ಮುಚ್ಚಿದ್ದ ಬಾಗಿಲನ್ನು ತೋರಿಸುತ್ತಾ ಕೇಳಿದ.

"ಸರ್ ಈ ಬಾಗಿಲು ಹೊರಗಡೆಯಿಂದ ತೆಗೆಯಲು ಬರುವುದಿಲ್ಲ. ಒಳಗಡೆಯಿಂದ ಮಾತ್ರ ತೆರೆಯಬಹುದು. ಇದು ನಾವು ಬಂದೆವಲ್ಲವಾ ಆ ಕಾರಿಡಾರ್‌ಗೆ ಹೋಗುತ್ತದೆ. ಆದರೆ, ಈ ರೂಂಗೆ ಯಾರಿಗೂ ಪ್ರವೇಶ ಇಲ್ಲ. ಕೇವಲ ದೊಡ್ಡಪ್ಪ ಮತ್ತು ವಿಶಾಲಾಕ್ಷಮ್ಮನಿಗೆ ಮಾತ್ರ" ಎಂದು ಸುನೀಲ್ ಹೇಳಿದ.

"ಹಾಗಾದರೆ ಕೊಲೆಗಾರ ಬೆಡ್‌ರೂಂನಿಂದ ಒಳಬಂದು ಕೊಲೆ ಮಾಡಿ ಓಡಿ ಹೋಗಿದ್ದಾನೆ ಎಂದಾಯಿತು.''

"ಇರಬಹುದು ಸಾರ್."

"ಗುಂಡೇಟಿನಿಂದ ಆದ ಸಾವು ಇದು; ನೇರ ಹೃದಯಕ್ಕೆ ಹೊಡೆದಿದೆ. ಅಂದರೆ ಜೋರಾಗಿ ಕೂಗಿರಬೇಕಲ್ಲವಾ? ಯಾರಿಗೂ ಕೇಳಿಸಲೇ ಇಲ್ಲವಾ" ಎಂದು ನಿಧಾನಕ್ಕೆ ತನ್ನ ಪೊಲೀಸ್ ಬುದ್ಧಿ ಬಿಚ್ಚಿದ. ಅವನ ಮಾತು ಮುಗಿಯುವುದರೊಳಗೆ ಫೋರೆನ್ಸಿಕ್‌ನವನು ಕೂಗಿದ–

"ಸರ್, ಕ್ಲೀನ್ ಆಗಿದೆ. ಯಾವ ಬೆರಳು ಗುರುತೂ ಇಲ್ಲ."

"ಯಾರೋ ಚಾಲಾಕಿ ಕೊಲೆಗಾರ ಇರಬೇಕು. ಈ ಸತ್ತ ವಿಶ್ವನಾಥ ಅವರದ್ದೂ ಇಲ್ಲವಾ... ಆಶ್ಚರ್ಯ! ಇದು ನನಗನಿಸುತ್ತದೆ ಒಳಗಿನವರದ್ದೇ ಕೆಲಸ ಅಂತ. ಈ ಕಾರಿಡಾರ್ ಕಡೆಯ ಬಾಗಿಲು ತೆರೆದಿಲ್ಲ. ಈ ರೂಂನ ಒಳಗೆ ಹೊರಗಿನ ಯಾರೂ ಬಂದಿಲ್ಲ. ಏನಂತೀರಿ ಸುನೀಲ್" ಎಂದ.

ನಾಗರಾಜಯ್ಯನ ಮುಖದ ಭಾವನೆಗಳನ್ನು ಓದಲು ಪ್ರಯತ್ನಿಸಿದ ಸುನೀಲ್. ಅರ್ಥವಾಗದೇ ಸುಮ್ಮನಾದ.

"ಸರಿ ಎವಿಡೆನ್ಸ್ ಕಲೆಕ್ಟ್ ಮಾಡಿ ಪಂಚನಾಮೆ ಮಾಡಿಸಿ ಪೋಸ್ಟ್‌ಮಾರ್ಟ್ಂಗೆ ಕಳುಹಿಸಿ" ಎಂದು ತನ್ನ ಸಹಚರರಿಗೆ ಸೂಚಿಸಿ, "ಈ ಮನೇಲಿ ಯಾರ್‍ಯಾರು ಇದ್ದಾರೆ ಕರೆಯಿರಿ ಮಾತಾಡ್ಬೇಕು" ಎಂದ.

ನಾಗರಾಜಯ್ಯನ ಧ್ವನಿಯಲ್ಲಿ ಸ್ವಲ್ಪ ಅವಸರ ಇತ್ತು. ಅವನ ಮಾತು ಕೇಳಿ ಸುನೀಲ್ ಹೊರಡಲನುವಾದ. ಆಗ "ರೀ ಪಿ.ಸಿ ನೀವು ಕರ್ಕೊಂಡು ಬನ್ರೀ... ಸುನೀಲ್ ನೀವು ಇಲ್ಲೇ ಇರಿ, ನಿಮ್ಮ ಹತ್ತಿರ ಕೆಲಸ ಇದೆ" ಎಂದ ನಾಗರಾಜಯ್ಯ. ಅವನ ಧ್ವನಿಯಲ್ಲಿ ಆದ ಬದಲಾವಣೆ ಸುನೀಲ್‌ಗೆ ಆಶ್ಚರ್ಯ ತಂದಿತು.

ಸುನೀಲ್ ಏನೋ ಹೇಳ ಹೊರಟ. ಅಷ್ಟರಲ್ಲಿ ''ಎಗ್ಸಿಟ್ ವೂಂಡ್ ಇದೆ. ಗುಂಡು ಸಿಗಲಿಲ್ಲವೇನಯ್ಯಾ... ನೀವು ಹೇಳ್ರಿ ಸುನೀಲ್... ಏಯ್ ಆ ವಿಶಾಲಾಕ್ಷಮ್ಮನನ್ನೂ ಕರೀರಿ'' ಅವನ ವರ್ತನೆ ಏಕಾಏಕಿ ಬದಲಾಗಿದ್ದು ನೋಡಿ ಸುನೀಲ್ ಸ್ವಲ್ಪ ಗಾಬರಿಯಾದ.

"ನಿಮ್ಮೆಲ್ಲರ ಬಗ್ಗೆ ವಿವರ ಹೇಳ್ರೀ ಸುನೀಲ್."

"ಸರ್ ಇವರು ನನಗೆ ದೂರದ ದೊಡ್ಡಪ್ಪ ಆಗಬೇಕು. ಮೊದಲಿನಿಂದಲೂ ಅಂಥಾ ಸಂಪರ್ಕ ಇರಲಿಲ್ಲ. ಅಮ್ಮನ ಪ್ರಕಾರ ನಮ್ಮ ಆಸ್ತಿ ಹೊಡೆದುಕೊಂಡಿದ್ದಾರಂತೆ. ಹಾಗಾಗಿ ನಮ್ಮ ಸಂಬಂಧ ಹಳಸಿತ್ತು. ಮೂರು ದಿನದ ಮುಂಚೆ ವಿಶಾಲಾಕ್ಷಮ್ಮನ ಕೈಲಿ ಫೋನ್ ಮಾಡಿಸಿ ಬಾ ಅಂದಿದ್ದರು. ನಿನ್ನೆ ಸಾಯಂಕಾಲ ಬಂದೆ. ಇವತ್ತು ನೋಡಿದರೆ ಹೀಗಾಗಿದೆ.''

ಅವನ ಮಾತುಗಳು ಮುಗಿಯುವಷ್ಟರಲ್ಲಿ ಕೆಳಗಿದ್ದ ಆರೂ ಜನ ಒಳಬಂದರು

"ಏನ್ರೀ ಇಲ್ಲೆ ಕಾರಿಡಾರ್‌ನಲ್ಲಿ ಇದ್ರಿ ಎಂದು ಕಾಣುತ್ತದೆ. ಬೇಗ ಬಂದ್ರಿ" ಎಂದ. ಅದಕ್ಕೆ ಅವರು